ಇ) ಹಾವೇರಿ ನ್ಯಾಯಾಲಯದಲ್ಲಿನ ಬಾಕಿ ಇರುವ ಪ್ರಕರಣಗಳಲ್ಲಿ ಸವಣೂರು ತಾಲ್ಲೂಕಿಗೆ ಸಂಬಂಧಿಸಿದ ಪ್ರಕರಣಗಳ ಸಂಖ್ಯೆಯನ್ನು ಪರಿಶೀಲಿಸಿದ ನಂತರ ಸಧ್ಯಕ್ಕೆ ಸವಣೂರಿನಲ್ಲಿ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ನ್ಯಾಯಾಲಯ ಸ್ಥಾಪಿಸುವ ಅಗತ್ಯವಿಲ್ಲವೆಂಬುದಾಗಿ ಉಚ್ಚನ್ಯಾಯಾಲಯ ತೀರ್ಮಾನಿಸಿದೆ.

5749, (5822) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಕಾರಾಗೃಹದಲ್ಲಿರುವ ರಾಜ್ಯ ಖೈದಿಗಳು ಹಾಗೂ ವಿಚಾರಣಾಧೀನ ಖೈದಿಗಳ ಸಂಖ್ಯೆ ಎಷ್ಟು ?

ಆ) ವಿಚಾರಣಾಧೀನ ಖೈದಿಗಳ ಪೈಕಿ 6 ತಿಂಗಳಿಗಿಂತ ಹೆಚ್ಚು ಕಾಲ ಕೋರ್ಟಿಗೆ ಹಾಜರುಪಡಿಸದೆ ಇರತಕ್ಕ ಖೈದಿಗಳ ಸಂಖ್ಯೆ ಎಷ್ಟು ?

ಇ) ವಿಚಾರಣಾಧೀನ ಖೈದಿಗಳನ್ನು ಕೋರ್ಟಿಗೆ ಕರೆದೊಯ್ಯಲು ಅಗತ್ಯ ಸಿಬ್ಬಂದಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಎಲ್ಲಾ ವಿಚಾರಣಾಧೀನ ಖೈದಿಗಳನ್ನು 6 ತಿಂಗಳೊಳಗೆ ಕೋರ್ಟಿಗೆ ಹಾಜರು ಪಡಿಸಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) ದಿನಾಂಕ 30–06–2005 ರಲ್ಲಿದ್ದಂತೆ ಸಂಖ್ಯೆ :

ಸಜಾ ಬಂಧಿಗಳು	–	1349 ಪುರುಷ, 18 ಮಹಿಳೆಯರು
ವಿಚಾರಣಾ ಬಂಧಿಗಳು	–	2514 ಪುರುಷ, 87 ಮಹಿಳೆಯರು

ಆ) ವಿಚಾರಣಾಧೀನ ಖೈದಿಗಳ ಪೈಕಿ 6 ತಿಂಗಳಿಗಿಂತ ಹೆಚ್ಚು ಕಾಲ ಕೋರ್ಟಿಗೆ ಹಾಜರು ಪಡಿಸದೆ ಇರತಕ್ಕ ಖೈದಿಗಳ ಸಂಖ್ಯೆ 198

ಇ) ಹೌದು. ಈ ಬಗ್ಗೆ ಅಗತ್ಯ ಬೆಂಗಾವಲು ಸಿಬ್ಬಂದಿ ಪೂರೈಸಲು ಪೋಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಬೆಂಗಳೂರು ಇವರನ್ನು ಕೋರಲಾಗಿದೆ.

ಈ) ಬಂದಿಗಳ ಪ್ರಕರಣಗಳನ್ನು ತ್ವರಿತ ವಿಲೇವಾರಿಗಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

1. ದೃಶ್ಯ ಮಾಧ್ಯಮ ಸಂವಾದ (ವಿಡಿಯೋ ಕಾನ್ಫರೆನ್ಸಿಂಗ್) ಮೂಲಕ ವಿವಿಧ ಗೌ : ನ್ಯಾಯಾಲಯಗಳ ಮುಂದೆ ವಿಚಾರಣ ಬಂಧಿಗಳ ಹಾಜರಾತಿ ಮಾಡುವುದು.
2. ಕಾರಾಗೃಹಗಳ ಆವರಣಗಳಲ್ಲಿಯೇ ಗೌ : ನ್ಯಾಯಾಲಯಗಳು ಲೋಕ ಅದಾಲತ್ ನಡೆಸಿ ಬಾಕಿ ಇದ್ದ ಪ್ರಕರಣಗಳ ವಿಲೇವಾರಿ ಮಾಡುವುದು.
3. ಕಾರಾಗೃಹಗಳ ಆವರಣದಲ್ಲಿಯೇ 2 ವಿಶೇಷ ಸತ್ರ ನ್ಯಾಯಾಲಯಗಳ ಸ್ಥಾಪನೆ ಮಾಡಿದೆ.

5750, (6600)ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಂಡ್ಯ ನಗರದಲ್ಲಿ ಗೂಡ್ಸ್ ಟೆಂಪೋಗಳಿಗೆ ಶಾಶ್ವತ ನಿಲ್ದಾಣ